1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

<u>ಸಿ.ಸಿ.ಸಂಖ್ಯೆ1025/2025</u>

ಪಿರ್ಯಾದಿ : ಕವಲಂದೆ ಪೊಲೀಸರು

ವಿರುದ್ಧ

ಆರೋಪಿ : 1 ಪುಟ್ಟಪ್ಪ **ಬಿನ್ ಲೇಟ್** ಸಿದ್ದಪ್ಪ (ಮೃತಪಟ್ಟಿರುತ್ತಾರೆ)

2 ನಾಗೇಶ **ಬಿನ್ ಲೇಟ್** ಚಿಕ್ಕಮಾದಪ್ಪ 38 ವರ್ಷ

ಆರೋಪಿತರ ವಾಸಃ ಚುಂಚನಹಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು

<u>ದೋಷಾರೋಪಣೆ</u>

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., *1*ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ**:-**

ನಂಜನಗೂಡು ತಾಲೂಕು, ಕವಲಂದೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಚುಂಚನಹಳ್ಳಿ ಗ್ರಾಮದ ಚಾಸಾ.1 ರವರ ಮನೆಯ ಮುಂಭಾಗ ಆರೋಪಿತರಾದ ನೀವು ಚಾಸಾ.2 ರವರ ಮನೆಯ ಪಕ್ಕದಲ್ಲಿ ಶೌಚಾಲಯಕ್ಕಾಗಿ ಗುಂಡಿಯನ್ನು ತೆಗೆಯುವುದನ್ನು ನಿಲ್ಲಿಸಿ ಸದರಿ ಜಾಗವು ತಮಗೆ ಸೇರಿದ್ದೆಂದು ಗುಂಡಿಯನ್ನು ಮುಚ್ಚುವಂತೆ ತಿಳಿಸಿದ್ದರೂ ಮುಚ್ಚದ್ದಕ್ಕಾಗಿ ದ್ವೇಷವನ್ನು ಇಟ್ಟುಕೊಂಡು ದಿಃ05.02.2025 ರಂದು 20.00 ಗಂಟೆ ಸಮಯದಲ್ಲಿ ಚಾಸಾ.1 ರವರ ತಮ್ಮ ಮನೆಯ ಮುಂದೆ ಕುಳಿತಿದ್ದಾಗ ಮೃತ 1ನೇ ಆರೋಪಿಯು ಚಾಸಾ.1 ರವರಿಗೆ ಬೋಳಿಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ಭಾರತೀಯ ನ್ಯಾಯ ಸಂಹಿತೆಯ ಕಲಂ.352 ಸಹವಾಚಕ ಕಲಂ.3(5) ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ ಮೃತ 1 ನೇ ಆರೋಪಿಯು ಚಾಸಾ.1 ರವರನ್ನು ತಬ್ಬಿ ಹಿಡಿದುಕೊಂಡು ಅಕ್ರಮ ತಡೆಯನ್ನುಂಟು ಮಾಡಿರುತ್ತಾರೆ.. ಆದ್ದರಿಂದ ಆರೋಪಿತರಾದ ಭಾರತೀಯ ನ್ಯಾಯ ಸಂಹಿತೆಯ ಕಲಂ.126(2) ಸಹವಾಚಕ ಕಲಂ.3(5)ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 2 ನೇ ಆರೋಪಿತರಾದ ನೀವು ಚಾಸಾ.1 ರವರ ಎಡಕೈಯ ಕಂಕುಳ ಹತ್ತಿರ, ಭುಜದ ಹತ್ತಿರ ಮತ್ತು ಭುಜದ ಹಿಂಭಾಗ ಬಲವಾಗಿ ನಿಮ್ಮ ಹಲ್ಲಿನಿಂದ ಕಚ್ಚಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ಭಾರತೀಯ ನ್ಯಾಯ ಸಂಹಿತೆಯ ಕಲಂ.115(2) ಸಹವಾಚಕ ಕಲಂ.3(5)ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 18.03.2026 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ1025/2025

ಪಿರ್ಯಾದಿ : ಕವಲಂದೆ ಪೊಲೀಸರು

ವಿರುದ್ಧ

ಆರೋಪಿ : 1 ಪುಟ್ಟಪ್ಪ **ಬಿನ್ ಲೇಟ್** ಸಿದ್ದಪ್ಪ (ಮೃತಪಟ್ಟಿರುತ್ತಾರೆ)

2 ನಾಗೇಶ **ಬಿನ್ ಲೇಟ್** ಚಿಕ್ಕಮಾದಪ್ಪ 38 ವರ್ಷ

ಆರೋಪಿತರ ವಾಸಃ ಚುಂಚನಹಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು

: ಆಪಾದನೆ :

**ಪ್ರಶ್ನೆ:1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?**

**2 ನೇ ಆರೋಪಿ ಉತ್ತರಃ**

**ಪ್ರಶ್ನೆ:2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?**

**2 ನೇ ಆರೋಪಿ ಉತ್ತರಃ**

ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

**ನಂಜನಗೂಡು**